(ಸಾಕ್ಷಿಯನ್ನು ದಿನಾಂಕಃ 05.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರವರ ವಕೀಲರುಃ ಶ್ರೀ .ಜಿಎನ್‌ಎಸ್ ರವರಿಂದ**

ಪ್ರತಿವಾದಿ 1 ಮತ್ತು 2 ರವರ ತಂದೆ ಕೆಂಡೇಗೌಡ ದಾವಾ ಆಸ್ತಿಯನ್ನು ದಿ 22-07-1947 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರದ ಅಡಿಯಲ್ಲಿ ಕೆಂಡೇಗೌಡ ಪೂ-ಪ 40 ಅಡಿ ಮತ್ತು ಉ-ದ 22 ವರೆ ಅಡಿ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರದಡಿಯಲ್ಲಿ ನಮೂದು ಮಾಡಿರುವ ಚಕ್ಕುಬಂಧಿ ಪೂರ್ವಕ್ಕೆ ಕರಿಪುಟ್ಟೇಗೌಡರ ಜಮೀನು ಮತ್ತು ಮನೆ ಎಂದರೆ ಸರಿ. ಪಶ್ಚಿಮಕ್ಕೆ ಸಿದ್ದೇಗೌಡರ ಮಕ್ಕಳ ಜಮೀನು ಎಂದರೆ ಸರಿಯಲ್ಲ. ನಂತರ ಸಾಕ್ಷಿ ಮುಂದುವರೆದು ಅಲ್ಲಿ ಗಲ್ಲಿ ಇದೆ ಎಂದು ನುಡಿಯುತ್ತಾರೆ. ಉತ್ತರ ಭಾಗದಲ್ಲಿ ಕೆಂಚಯ್ಯ ರವರಿಗೆ ಸೇರಿದ ಹಿಸ್ಸೆ ಎಂಬುದಾಗಿ ನಮೂದು ಮಾಡಿದ್ದಾರೆಂದರೆ ಸರಿ. ಸದರಿ ಕೆಂಚಯ್ಯ ನಮ್ಮ ತಂದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಸರ್ಕಾರಿ ಬೀದಿ ಎಂದರೆ ಸರಿ. ಸದರಿ ಚಕ್ಕುಬಂಧಿಯಲ್ಲಿರುವ ಜಮೀನಿನಲ್ಲಿ ಅಂದರೆ ಪೂ-ಪ 40 ಅಡಿ ಮತ್ತು ಉ-ದ 22 ವರೆ ಅಡಿ ಜಮೀನಿನಲ್ಲಿ ಪ್ರತಿವಾದಿ 1 ಮತ್ತು 2 ರವರು ಸ್ವಾದೀನದಲ್ಲಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ಸ್ವಾದೀನದಲ್ಲಿದ್ದರೂ ಕೂಡ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಂದರೆ ಪೂ-ಪ 40 ಅಡಿ ಮತ್ತು ಉ-ದ 22 ವರೆ ಅಡಿ ಜಮೀನಿಗೆ ಸಂಬಂಧಪಟ್ಟಂತೆ ನಿಮ್ಮ ತಾಯಿ ಅಕ್ರಮವಾಗಿ ಪಂಚಾಯಿತಿಯಲ್ಲಿ ಖಾತೆ ಮಾಡಿಸಿಕೊಂಡಿದ್ದಾರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಿಮಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿಯವರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಕ್ರಮವಾಗಿ ಮಾಡಿಸಿಕೊಂಡಿದ್ದ ಖಾತೆಯನ್ನು ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಗಳ ನ್ಯಾಯಾಲಯದಲ್ಲಿ ರದ್ದುಪಡಿಸಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ಹಕ್ಕು ಮತ್ತು ಅಧಿಕಾರ ಇಲ್ಲದೇ ಇದ್ದರೂ ಕೂಡ ಪ್ರತಿವಾದಿ 1 ಮತ್ತು 2 ರವರ ತಂದೆಗೆ ಸೇರಿದ ಆಸ್ತಿಯನ್ನು ದಾವಾ ಆಸ್ತಿಗೆ ಸೇರಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಇಂದೂ ಕೂಡ ದಾವಾ ಆಸ್ತಿಯಲ್ಲಿ ಪ್ರತಿವಾದಿ 1 ಮತ್ತು 2 ರವರು ಸ್ವಾದೀನದಲ್ಲಿದ್ದರೂ ಕೂಡ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೂ-ಪ 40 ಅಡಿ ಮತ್ತು ಉ-ದ 22 ವರೆ ಅಡಿ ಜಮೀನಿನಲ್ಲಿ ನೀವು ಯಾವತ್ತೂ ಕೂಡ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಿ 20-05-2022 ರಂದು ಪ್ರತಿವಾದಿಗಳು ನನ್ನನ್ನು ದಾವಾ ಆಸ್ತಿಯಿಂದ ಹೊರಹಾಕುವ ಉದ್ದೇಶದಿಂದ ನನ್ನ ಮೇಲೆ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿ.

ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.